ಓ. ಎಸ್ . 261/2019 ಪಿ.ಡಬ್ಲ್ಯೂ - 2 ಶ್ರೀನಿವಾಸ ಪಿ ಎಚ್
( ದಿನಾಂಕ 10-12-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)

**ಮುಂದುವರೆದ ವಾಟಿ ಸವಾಲು : ಪ್ರತಿವಾದಿ ಪರ ಶ್ರೀ ಬಿ ಎಂ ಜೆ ವಕೀಲರಿಂದ -**

1. 2019 ರಲ್ಲಿ ಆದಂತಹ ಅಳತೆ ಸಮಯದಲ್ಲಿ ನಾನು ಉತ್ತರಕ್ಕೆ ರಸ್ತೆಯನ್ನು ತೋರಿಸಿರಲಿಲ್ಲ ಎಂದರೆ ನಿಜ. ನಂತರ ನ್ಯಾಯಾಲಯದ ಆಂದೇಶದ ಮೇರೆಗೆ ದಿನಾಂಕ 9-10-2025 ರಂದು ಮಾಡಿದಂತಹ ಅಳತೆಯಲ್ಲಿ ಉತ್ತರಕ್ಕೆ ನಾನು ರಸ್ತೆ ತೋರಿಸಿದ್ದೇನೆ. ಉತ್ತರಕ್ಕೆ ಇರುವಂತಹ ರಸ್ತೆ ಕಾಲುದಾರಿ ಇದ್ದು ಅದು ಅಂದಾಜು 4 ಅಡಿ ಅಗಲ ಇದೆ. ಟಿಪ್ಪಣಿ ಪ್ರಕಾರ ಕಾಲುದಾರಿ ಇರುವುದನ್ನು ನಾನು ಖಾತ್ರಿ ಮಾಡಿಕೊಂಡಿದ್ದೇನೆ. ಟಿಪ್ಪಣಿ ಪ್ರಕಾರ ಕಾಲುದಾರಿ ಉತ್ತರಕ್ಕೆ ಇರುವುದಿಲ್ಲ , ಅದು ವಹಿವಾಟಿನಂತೆ ಇರುವ ರಸ್ತೆ . ಆ ಕುರಿತು ವರದಿಯಲ್ಲಿ ನಾನು ನಮೂದು ಮಾಡಿರುವುದಿಲ್ಲ. ಸರ್ವೆ ನಂ. 483 ದಕ್ಷಿಣ ಬದಿಗೆ ಇರತಕ್ಕಂತಹ ರಸ್ತೆಯನ್ನು ನನ್ನ ಈ ಹಿಂದಿನ ವರದಿಯಲ್ಲಿ ತೋರಿಸಿರುವುದಿಲ್ಲ. ನಾನು ಅಳತೆ ಮಾಡಲು ಹೋದಂತಹ ಸಮಯದಲ್ಲಿ ಕಬ್ಬಿನ ಬೆಳೆ ಇತ್ತು ಎಂದರೆ ನಿಜ. ನಾನು ಈ ಹಿಂದೆ ಅಳತೆ ಮಾಡಿ ಹದ್ದುಬಸ್ತು ಗುರುತು ಮಾಡಿದಂತಹ ಕಲ್ಲು ನಾನು 2025 ರಲ್ಲಿ ಅಳತೆಗೆ ಹೋದಾಗ ಇರಲಿಲ್ಲ. ನಾನು ಹಿಂದೆ ಹದ್ದುಬಸ್ತು ಮಾಡಿದಂತಹ ಗುರುತು ಕಲ್ಲುಗಳನ್ನು ನನ್ನ ಪಿಟಿ ಶೀಟಿನಲ್ಲಿ ಗುರುತು ಮಾಡಿದ್ದೇನೆ . ವಹಿವಾಟಿನ ಪ್ರಕಾರ ಇರತಕ್ಕಂತಹ ಕಲ್ಲುಗಳನ್ನು ನಾನು "N" ಎಂಬ ಅಕ್ಷರದಿಂದ 2025 ರ ಪಿಟಿ ಶೀಟಿನಲ್ಲಿ ಗುರುತು ಮಾಡಿದ್ದೇನೆ. 2019 ರಲ್ಲಿ "N" ಎಂಬ ಅಕ್ಷರದಿಂದ ಗುರುತು ಮಾಡಿದ ಕಲ್ಲುಗಳು 2025 ರ ಪಿಟಿ ಶೀಟಿನಲ್ಲೂ ಸಹ ನಮೂದು ಮಾಡಿದ್ದೇನೆ. ಸರ್ವೆ ನಂ. 482 ಮತ್ತು 483 ರ ಮಧ್ಯದಲ್ಲಿ ಲೈಟ ಕಂಬಗಳು ಇವೆ ಎಂದರೆ ಸರಿಯಲ್ಲ. ನನ್ನ ಎರಡೂ ಪಿಟಿ ಶೀಟನಲ್ಲಿ ಲೈಟ ಕಂಬಗಳ ಬಗ್ಗೆ ಉಲ್ಲೇಖ ಮಾಡಿಲ್ಲ ಎಂದರೆ ನಿಜ. ಅವುಗಳು ಪರಮನಂಟ ಗುರುತಿನ ಕಲ್ಲುಗಳು ಅಲ್ಲ. ಅವುಗಳು ಪರಮನಂಟ ಗುರುತುಗಳು ಅಲ್ಲ, ಆದ್ದರಿಂದ ಅದನ್ನು ನನ್ನ ಪಿಟಿ ಶೀಟನಲ್ಲಿ ಗುರುತು ಮಾಡಿಲ್ಲ ಎಂದು ಹೇಳುತ್ತಾರೆ. ಸರ್ವೆ ನಂ. 482 ಮತ್ತು 483 ರ ನಡುವೆ ಬಾಂದುಗಳು ಮತ್ತು ಸೀಮೆ ಕಲ್ಲುಗಳು ಇವೆ ಎಂದರೆ ಸಾಕ್ಷಿ ಸರ್ವೆ ನಂ. 482 ಮತ್ತು 483 ರ ದಕ್ಷಿಣದ ಬಾಜು ಫಿಕ್ಸಡ ಸ್ಟೋನ ಇದೆ ಹಾಗೂ ದಕ್ಷಿಣ ದಿಕ್ಕಿನ ಪೂರ್ವ ಬಾಜುವಿನಲ್ಲಿ ಒಂದು ಫಿಕ್ಸಡ ಸ್ಟೋನ ಇದೆ . ವಾದಿಯರ ಜಾಗದ ಉತ್ತರ ದಿಕ್ಕಿನ ಪೂರ್ವ ಬಾಜುವಿನಲ್ಲಿ ಒಂದು ಫಿಕ್ಸಡ ಸ್ಟೋನ ಇದೆ .

2. ಸರ್ವೆ ನಂ. 482 ಮತ್ತು 483 ರ ಮಧ್ಯದಲ್ಲಿ ಗಿಡಗಂಟೆಗಳು ಬೆಳೆದಿದ್ದಾವೆ ಎಂರದೆ ನಿಜ. ಸರ್ವೆ ನಂ. 484 ನ ಮಾಲೀಕರು ಸರ್ವೆ ನಂ. 483 ರ ಜಮೀನಿನಲ್ಲಿ 6 ಆಣೆಯಷ್ಟು ಜಮೀನನ್ನು ಅತಿಕ್ರಮಣ ಮಾಡಿರುತ್ತಾರೆ ಎಂದು ಬರೆದಿರುತ್ತೇನೆ.

3. 2019 ರಲ್ಲಿ ಳತೆ ಮಾಡಿ ಪಿಟಿ ಶೀಟ ತಯಾರಿಸಿದಾಗ ಸರ್ವೆ ನಂ. 484 ನ ಮಾಲೀಕರು ಸರ್ವೆ ನಂ. 483 ರ ಜಮೀನಿನಲ್ಲಿ 8 ಆಣೆಯಷ್ಟು ಜಮೀನನ್ನು ಅತಿಕ್ರಮಣ ಮಾಡಿರುತ್ತಾರೆ ಎಂದು ಬರೆದಿರುತ್ತೇನೆ ಎಂದರೆ ನಿಜ. ಸರ್ವೆ ನಂ. 483 ಮತ್ತು 484 ರ ಮಧ್ಯದಲ್ಲಿ ಬಾಂದ ಇದೆ ಎಂದರೆ ಸರಿಯಲ್ಲ. ಅಲ್ಲಿ ಬಾಂದ ಇದ್ದರೂ ಸಹ ನಾನು ಬಾಂದ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ. 482 ಮತ್ತು 483 ರ ನಡುವೆ ಉತ್ತರದಿಂದ ದಕ್ಷಿಣಕ್ಕೆ 484 ರ ತನಕ ಬಾಂದ ಇದೆ ಎಂದರೆ ಸರಿಯಲ್ಲ. ಸರ್ವೆ ನಂ. 482 ಮತ್ತು 483 ರ ಮಾಲಿಕರು ಈ ಹಿಂದೆ 2019 ರಲ್ಲಿ ನಾನು ಅಳತೆ ಮಾಡಿದ ಪ್ರಕಾರ ಏನು ವಹಿವಾಟಿನ ಪ್ರಕಾರ ಆಸ್ತಿ ಅನುಭವಿಸುತ್ತಿದ್ದರೋ ಅದೇ ಪ್ರಕಾರ 2025 ರಲ್ಲೂ ಸಹ ವಹಿವಾಟ ಮಾಡುತ್ತಿದ್ದಾರೆ ಎಂದರೆ ನಿಜ.

4. 2019 ರಲ್ಲಿ ಮತ್ತು 2025 ರಲ್ಲಿ ಎರಡೂ ಬಾರಿ ಪಾಳಿಣಿ ಪದ್ದತಿ ಪ್ರಕಾರ ಅಳತ ಮಾಡಿದ್ದೇನೆ ಎಂದರೆ ನಿಜ. ಪಾಳಿಣಿ ಎಂದರೆ ಎಂಜಾಯಮೆಂಟ ಪ್ರಕಾರ ಅಳತೆ ಮಾಡುವುದು . ಪಾಳಿಣಿ ಎಂದರೆ ಸರಪಳಿ ಮತ್ತು ಟೇಪ ಮೂಲಕ ಅಳತೆ ಮಾಡುವುದು ಎಂದರೆ ಎಂಜಾಯಮೆಂಟ ಪ್ರಕಾರ ಹಾಗೂ ಸರಪಳಿ ಮತ್ತು ಟೇಪ ಮೂಲಕ ಅಳತೆ ಮಾಡುವುದು.

5. ನಾನು 2025 ರಲ್ಲಿ ಆಧುನಿಕ ಪದ್ದತಿ ಪ್ರಕಾರ ರೋವರ ಮಶೀನ ಉಪಯೋಗಿಸಿಕೊಂಡು ನ್ಯಾಯಾಲಯದ ಆದೇಶದ ಪ್ರಕಾರ ಮಾಡಿದ್ದೇನೆ . ಸರಪಳಿ ಮತ್ತು ಟೇಪ ಉಪಯೋಗಿಸಿಲ್ಲ . ನಾನು ಪಿಟಿ ಶೀಟಿನಲ್ಲಿ ಪಾಳಿಣಿ ಪದ್ದತಿ ಹಾಗೂ ರೋವರ ಎರಡೂ ಅಂಶಗಳನ್ನು ನಮೂದು ಮಾಡಿದ್ದೆನೆ . ರೋವರ ಎಂದರೆ ನೆಟವರ್ಕ ಮೂಲಕ ಲಾಂಗಿಟ್ಯೂಡ ಮತ್ತು ಲ್ಯಾಟಿಟ್ಯೂಡ ಖಾತ್ರಿ ಮಾಡಿಕೊಂಡು ಅಳತೆ ಮಾಡುವುದು ಎಂದರೆ ನಿಜ. ಕೆಲವೊಂದು ಬಾರಿ ಹವಾಮಾನ ವ್ಯತಾಸದಿಂದ ನೆಟವರ್ಕ ಬರುವುದಿಲ್ಲ ಎಂದರೆ ನಿಜ. ನನ್ನ ಪಿಟಿ ಶೀಟಿನಲ್ಲಿ ದಿನಾಂಕ 25-10-2025 ರಂದು ಮಳೆ ಬರುತ್ತಿತ್ತು ಎಂದು ನಮೂದು ಮಾಡಿದ್ದೇನೆ . ಮಳೆ ಬಿಟ್ಟ ನಂತರ ನಾನು ಅಳತೆ ಮಾಡಿದ್ದೇನೆ. ಆ ದಿನ ನಮ್ಮ ರೋವರ ಸರಿಯಾದ ನೆಟವರ್ಕ ಇಲ್ಲದ ಕಾರಣ ಆ ಮಶೀನ ಸರಿಯಾದ ಪಾಯಿಂಟ ತೋರಿಸುತ್ತಿರಲಿಲ್ಲ ಎಂದರೆ ಸರಿಯಲ್ಲ . ನಾನು ರೋವರ

ಮೂಲಕ ಅಳತೆ ಮಾಡಿದಂತಹ ಪಿಟಿ ಶೀಟನ್ನೆ ನ್ಯಾಯಾಲಯಲಕ್ಕೆ ಹಾಜರ ಮಾಡಿದ್ದೇನೆ, ಅದರಲ್ಲಿ ಯಾವುದೇ ಆಲ್ಟರೇಶನ ಮಾಡಿರುವುದಿಲ್ಲ . ನಾನು ಕಂಪ್ಯೂಟರೈಸಜ ಪ್ರಿಂಟ ಔಟನ್ನು ನ್ಯಾಯಾಲಯಕ್ಕೆ ಹಾಜರ ಮಾಡಿಲ್ಲ ಎಂದರೆ ಸರಿಯಲ್ಲ.ನಾನು ಮ್ಯಾನೂಯಲ್ ಪ್ರಕಾರ ಕಛೇರಿಯಲ್ಲಿ ಕುಳಿತು ಆ ಮ್ಯಾಪನ್ನು ತಯಾರಿಸಿದ್ದೇನೆ ಎಂದರೆ ಸರಿಯಲ್ಲ. 2019 ರಲ್ಲಿ ಮಾಡಿದಂತ ಮ್ಯಾಪ ಪ್ರಕಾರ ನಾನು 2025 ರಲ್ಲಿ ಪಿಟಿ ಶೀಟನ್ನು ತಯಾರು ಮಾಡಿದ್ದೇನೆ ಎಂದರೆ ಸರಿಯಲ್ಲ. ಆ ದಿನ ರೋವರ ಮಶೀನ ಸರಿಯಾಗಿ ಕಾರ್ಯ ನಿರ್ವಹಿಸುತ್ತಿರಲಿಲ್ಲ ಎಂದರೆ ಸರಿಯಲ್ಲ.

6. ಸರ್ವೆ ನಂ. 483 ಯ ಜಮೀನಿನಲ್ಲಿ 482 ಜಮೀನಿನವರು 1 ಗುಂಟೆ ಉತ್ತರ ಬದಿಗೆ ಒತ್ತುವರಿ ಮಾಡಿದ್ದಾರೆ ಎಂದು ಸುಳ್ಳು ತೋರಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಅಳತೆ ಮಾಡಿದ್ದೆನೆ ಸುಳ್ಳು ಪಿಟಿ ಶೀಟನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

**( ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆಳರಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೇ**

(ಆದಿತ್ಯ ಆರ್. ಕಲಾಲ್)
ಸಿ ಜೆ ಮತ್ತು ಜೆ ಎಂ ಎಫ್ ಸಿ , ಹುಕ್ಕೇರಿ